ಚುಕ್ಕೆ ಗುರುತಿಲ್ಲದ ಪ್ರಶ್ನೆ 20 : 71

ಸದಸ್ಯರ ಹೆಸರು : ಶ್ರೀ ಹ್ಯಾರಿಸ್ ಎನ್. ಎ. (ಶಾಂತಿನಗರ)

ಉತ್ತರಿಸುವ ಸಚಿವರು : ಶ್ರೀ ಸಿ. ಎಂ. ಉದಾಸಿ (ಲೋಕೋಪಯೋಗಿ ಸಚಿವರು)

ಕ್ರ. ಸಂ.	ಪ್ರಶ್ನೆ	ಉತ್ತರ
ಅ	ಬೆಂಗಳೂರು - ಮಂಗಳೂರು ರಾಷ್ಟ್ರೀಯ ಹೆದ್ದಾರಿಯ ಅವ್ಯವಸ್ಥೆಯಿಂದಾಗಿ ಸಂಚಾರಕ್ಕೆ ತೀವ್ರಕರ ಅನಾನುಕೂಲ ವುಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಹೌದು.
ಆ.	ಹಾಗಿದ್ದಲ್ಲಿ ದೀರ್ಘ ಕಾಲದಿಂದಲೂ ಸಮರ್ಪಕ ದುರಸ್ತಿ ಕಾರ್ಯಗಳನ್ನು ಕೈಗೆತ್ತಿಕೊಳ್ಳದೇ ಇರಲು ಕಾರಣ ಗಳೇನು?	ಹಾನಿಗೊಳಗಾದ ಭಾಗದ ರಸ್ತೆಯಲ್ಲಿ ವಾರ್ಷಿಕ ನಿರ್ವಹಣೆ ಹಾಗೂ ಮಳೆಹಾನಿ ದುರಸ್ತಿ ಅಡಿಯಲ್ಲಿ ಆಗಿಂದಾಗ್ಗೆ ಗುಂಡಿಗಳನ್ನು ಮುಚ್ಚಿ ತಾತ್ಕಾಲಿಕ ದುರಸ್ತಿ ಕೈಗೊಳ್ಳಲಾಗಿತ್ತು. ಶಿರಾಡಿಘಾಟ್ ಭಾಗದ ರಸ್ತೆಯ ಸಮರ್ಪಕ ದುರಸ್ತಿಗೆ ನಾಲ್ಕು ಬಾರಿ ಟೆಂಡರು ಕರೆದರೂ ಯಾವುದೇ ಗುತ್ತಿಗೆದಾರರು ಕೂಡಲೇ ಮುಂದೆ ಬಾರದೆ ಕಾರಣ ಶಾಶ್ವತ ದುರಸ್ತಿ ಕೆಲಸ ವಿಳಂಬವಾಗಿರುತ್ತದೆ.
ಇ.	ಈ ರಸ್ತೆಯ ದುರಸ್ತಿ ಕಾರ್ಯ ಗಳಿಂದಾಗಿ ಒಟ್ಟು ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ?	ರೂ. 3393.38 ಲಕ್ಷಗಳು ವೆಚ್ಚವಾಗಿರುತ್ತದೆ.
ಈ.	ಪೂರ್ಣ ಪ್ರಮಾಣದ ದುರಸ್ತಿ ಕಾರ್ಯ ವನ್ನು ಯಾವಾಗ ವ್ಯವಸ್ಥೆಗೊಳಿಸಿ ಸಂಚಾರಕ್ಕೆ ಅನುಕೂಲ ಮಾಡಿಕೊಡ ಲಾಗುವುದು?	ರಾ.ಹೆ-48ರ ಶಿರಾಡಿಘಾಟ್ ಭಾಗದ ರಸ್ತೆಯ ದುರಸ್ತಿಗೆ ಮೂರು ಕಾಮಗಾರಿಗಳನ್ನು 2007-08ರಲ್ಲಿ ಕೈಗೆತ್ತಿಕೊಂಡು ಎಲ್ಲಾ ಕಾಮಗಾರಿಗಳನ್ನು ಬಹುತೇಕ ಪೂರ್ಣಗೊಳಿಸಲಾಗಿದ್ದು ಹೆದ್ದಾರಿಯನ್ನು ವಾಹನ ಸಂಚಾರಕ್ಕೆ 12-6-2008 ರಿಂದ ತೆರವು ಗೊಳಿಸಲಾಗಿದೆ.

ಊ.	ಶಿರಾಡಿಘಾಟ್ ಪ್ರದೇಶದಲ್ಲಿನ ಹೆಚ್ಚಿನ ದುರಸ್ತಿ ಕಾರ್ಯಗಳಿಗಾಗಿ ಈತನಕ ಎಷ್ಟು ಹಣವನ್ನು ವೆಚ್ಚ ಮಾಡಲಾಗಿದೆ;	ಶಿರಾಡಿಘಾಟ್ ಪ್ರದೇಶದಲ್ಲಿನ ಹೆಚ್ಚಿನ ದುರಸ್ತಿ ಕಾರ್ಯಗಳಿಗಾಗಿ ಈ ತನಕ ಒಟ್ಟು ರೂ.3242.00 ಲಕ್ಷಗಳು ವೆಚ್ಚವಾಗಿರುತ್ತದೆ.
ಋ.	ದುರಸ್ತಿ ಕಾರ್ಯ ಮುಗಿಸಿ ಸಂಚಾರಕ್ಕೆ ಯಾವಾಗ ಮುಕ್ತಗೊಳಿಸಲಾಗುವುದು?	12-6-2008 ರಿಂದ ಸಂಚಾರಕ್ಕೆ ರಸ್ತೆಯನ್ನು ಮುಕ್ತಗೊಳಿಸಲಾಗಿದೆ.